ತೆರೆದ - ಅಂಚೆ

# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,

ನಂ. 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು

## ಇದರ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ

## ಚುನಾವಣಾ ನೋಟೀಸಿನೊಂದಿಗೆ ಚುನಾವಣಾ ವೇಳಾಪಟ್ಟಿ

ದಿನಾಂಕ : 28-01-2024ನೇ ಭಾನುವಾರ

ಸಮಯ : ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ

ಸ್ಥಳ : ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆ

4ನೇ ಮುಖ್ಯ ರಸ್ತೆ, 6ನೇ ಕ್ರಾಸ್, ಜಯನಗರ ಮೈಸೂರು - 570 014

ಶ್ರೀಮತಿ / ಶ್ರೀ ..............................................................................

..............................................................................................

..............................................................................................

ಸೂಚನೆ : ಸದಸ್ಯರು ಚುನಾವಣೆಯಲ್ಲಿ ಮತ ಚಲಾಯಿಸಲು ಸಂಘದಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸುವುದು. ತಪ್ಪಿದಲ್ಲಿ ಮತದಾನ ಮಾಡಲು ಅವಕಾಶವಿರುವುದಿಲ್ಲ.

ನಮೂನೆ-12 (ನಿಯಮ 14(3))

# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಮೈಸೂರು

## ಇವರ ರಿಟರ್ನಿಂಗ್ ಆಫೀಸರ್ ಕಾರ್ಯಾಲಯದಿಂದ ಚುನಾವಣಾ ನೋಟೀಸಿನೊಂದಿಗೆ ಚುನಾವಣಾ ವೇಳಾಪಟ್ಟಿ

ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಮೈಸೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರ ಆದೇಶ ಸಂಖ್ಯೆ: ಜೆಆರ್‌ಎಂ/ಸಿ/ಆಮಂಚು/ ಸಿಆರ್-177 /2023-24 ದಿ:6-12-2023 ರನ್ವಯ ರಿಟರ್ನಿಂಗ್ ಆಫೀಸರ್ ಆಗಿ ನನ್ನನ್ನು ನೇಮಕಾತಿಗೊಳಿಸಿ ಆದೇಶಿಸಿದ್ದು, ಸದರಿ ಆದೇಶದನ್ವಯ ಈ ಸಂಘದ ಉಪನಿಯಮ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960ರ ಅಂಶಗಳನ್ವಯ ದಿನಾಂಕ : 28-1-2024 ರಂದು ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆ, ಜಯನಗರ ಮೈಸೂರು ಇಲ್ಲಿ ಸಾಮಾನ್ಯ, ಮಹಿಳೆ, ಹಿಂದುಳಿದ ವರ್ಗ ಪ್ರವರ್ಗ-ಎ, ಪ್ರವರ್ಗ-ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಒಳಗೊಂಡಂತೆ ಆಡಳಿತ ಮಂಡಳಿಯ ನಿರ್ದೇಶಕರುಗಳ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

| ಕ್ರ.ಸಂ. ಚುನಾವಣಾ ಕಾರ್ಯ ಸೂಚಿಯ ವಿವರಗಳು | ದಿನಾಂಕ / ವಾರ / ಸ್ಥಳ / ಮತ್ತು ವೇಳೆ ವಿವರ |
|---|---|
| 1. ನಾಮಿನೇಷನ್ ಅರ್ಜಿಗಳನ್ನು ಸ್ವೀಕರಿಸಲಾಗುವ ಪ್ರಾರಂಭದ ದಿನಾಂಕ | ದಿ:14-1-2024ನೇ ಭಾನುವಾರ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 2-00 ಗಂಟೆ ಒಳಗೆ ಸಂಘದ ಕಛೇರಿಯಲ್ಲಿ |
| 2. ಆಕಾಂಕ್ಷೆಯುಳ್ಳ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14ಎ) | ದಿ:20-01-2024ನೇ ಶನಿವಾರ ಬೆಳಿಗ್ಗೆ 11-00ರಿಂದ ಮಧ್ಯಾಹ್ನ 2-00 ಗಂಟೆ ಒಳಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ಆಫೀಸರ್‌ರವರಿಗೆ |
| 3. ರಿಟರ್ನಿಂಗ್ ಆಫೀಸರ್‌ರವರಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14ಬಿ) | ದಿ:21-01-2024ನೇ ಭಾನುವಾರ ಬೆಳಿಗ್ಗೆ 11-00 ಗಂಟೆಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್‌ರವರಿಂದ |
| 4. ರಿಟರ್ನಿಂಗ್ ಆಫೀಸರ್‌ರವರಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ್ದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14ಬಿ (4) | ದಿ : 21-01-2024ನೇ ಭಾನುವಾರ ನಾಮ ಪತ್ರಗಳ ಪರಿಶೀಲನೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ |
| 5. ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನ (ನಿಯಮ 14ಸಿ) | ದಿ : 22-01-2024ನೇ ಸೋಮವಾರ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆ ಒಳಗೆ ರಿಟರ್ನಿಂಗ್ ಆಫೀಸರ್‌ಗೆ ಸಂಘದ ಕಛೇರಿಯಲ್ಲಿ |
| 6. ರಿಟರ್ನಿಂಗ್ ಆಫೀಸರ್‌ರವರಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14ಡಿ) | ದಿ:22-1-2024ನೇ ಸೋಮವಾರ ಮಧ್ಯಾಹ್ನ 3-00 ಗಂಟೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್‌ರವರಿಂದ |
| 7. ರಿಟರ್ನಿಂಗ್ ಆಫೀಸರ್‌ರವರಿಂದ ಅವಶ್ಯವಿದ್ದಲ್ಲಿ ಅಭ್ಯರ್ಥಿಗಳಿಗೆ ಚಿಹ್ನೆಯ ಹಂಚಿಕೆ ಮಾಡುವುದು | ದಿ:22-1-2024ನೇ ಸೋಮವಾರ ಮಧ್ಯಾಹ್ನ 3-00 ಗಂಟೆಯ ನಂತರ ರಿಟರ್ನಿಂಗ್ ಆಫೀಸರ್‌ರವರಿಂದ |
| 8. ಚಿಹ್ನೆ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14 ಡಿ ಮತ್ತು ಇ) | ದಿ23-1-2024ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸಂಘದ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್‌ರವರಿಂದ |
| 9. ಮತದಾನ ಅವಶ್ಯಕತೆ ಇದ್ದಲ್ಲಿ ಮತದಾನದ ದಿನಾಂಕ, ವೇಳೆ ಮತ್ತು ಸ್ಥಳ | ದಿ:28-1-2024ನೇ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆವರೆಗೆ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆ, ಜಯನಗರ ಮೈಸೂರು |
| 10. ಮತಗಳ ಎಣಿಕೆಯ ದಿನಾಂಕ ಹಾಗೂ ವೇಳೆ | ದಿ:28-1-2024ರಂದು ಮತದಾನ ಮುಕ್ತಾಯವಾದ ನಂತರ |
| 11. ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣಾ ಫಲಿತಾಂಶ ಪ್ರಕಟಣೆ | ದಿ:28-1-2024ರಂದು ಮತ ಎಣಿಕೆ ಮುಕ್ತಾಯವಾದ ನಂತರ |

## : ಸೂಚನೆಗಳು :

1. ಚುನಾವಣೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 (ಈವರೆಗಿನ ತಿದ್ದುಪಡಿ ಒಳಗೊಂಡಂತೆ) ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (ಈವರೆಗಿನ ತಿದ್ದುಪಡಿ ಒಳಗೊಂಡಂತೆ) ಮತ್ತು ಸಂಘದ ಉಪನಿಯಮಗಳನ್ವಯ ನಡೆಯಲಿದೆ.
2. ಸಂಘದ ಉಪನಿಯಮದನ್ವಯ ಆಡಳಿತ ಮಂಡಳಿಗೆ ಒಟ್ಟು 15 (ಹದಿನೈದು) ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಗುತ್ತದೆ. ಈ ಪೈಕಿ 09 ಸ್ಥಾನ ಸಾಮಾನ್ಯ, 1 ಸ್ಥಾನ ಪರಿಶಿಷ್ಟ ಜಾತಿ ಮೀಸಲು, 1 ಸ್ಥಾನ ಪರಿಶಿಷ್ಟ ಪಂಗಡ ಮೀಸಲು, 1 ಸ್ಥಾನ ಹಿಂದುಳಿದ ವರ್ಗಗಳ ಪ್ರವರ್ಗ "ಎ" ಮೀಸಲು, 1 ಸ್ಥಾನ ಹಿಂದುಳಿದ ವರ್ಗಗಳ ಪ್ರವರ್ಗ "ಬಿ" ಮೀಸಲು, 2 ಸ್ಥಾನ ಮಹಿಳಾ ಮೀಸಲು ಸ್ಥಾನಗಳಿಗೆ ಮೀಸಲಿರಿಸಿದೆ.
3. ಸಂಘದ ಉಪ ನಿಯಮದನ್ವಯ ಈ ಚುನಾವಣೆಯಲ್ಲಿ ಹಿಂದುಳಿದ ವರ್ಗದ ಪ್ರವರ್ಗ 'ಎ' ಮತ್ತು ಪ್ರವರ್ಗ 'ಬಿ' ಅಭ್ಯರ್ಥಿಗಳನ್ನು ಚುನಾಯಿಸಬೇಕಾಗಿರುತ್ತದೆ. ಆದ್ದರಿಂದ ಹಿಂದುಳಿದ ವರ್ಗಗಳ ಮೀಸಲು ಸ್ಥಾನದಿಂದ ಸ್ಪರ್ಧಿಸುವ ಪ್ರವರ್ಗ 'ಎ' ಮತ್ತು ಪ್ರವರ್ಗ 'ಬಿ' ಗುಂಪಿನ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪ್ರವರ್ಗ 'ಎ' ಮತ್ತು ಪ್ರವರ್ಗ 'ಬಿ' ಜಾತಿ ಪ್ರಮಾಣ ಪತ್ರವನ್ನು ಪಡೆದ ನಾಮಪತ್ರದೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು.
4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲು ಸ್ಥಾನಗಳಿಂದ ಸ್ಪರ್ಧಿಸುವ ಉಮೇದುವಾರರು ಸಕ್ಷಮ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದು ನಾಮಪತ್ರದೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು.
5. ಸಂಘದ ಉಪನಿಯಮಗಳನ್ವಯ ನಿರ್ದೇಶಕರನ್ನು ಚುನಾಯಿಸಬೇಕಾದ ಮತಕ್ಷೇತ್ರ/ ಪ್ರದೇಶವು ಸಂಘದ ಉಪ ನಿಯಮ ಸಂಖ್ಯೆ (3) ರಲ್ಲಿ ನಮೂದಿಸಿರುವ ಕಾರ್ಯವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ.
6. ಸಂಘದ ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳು ಹಾಗೂ ಸಂಘದ ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.
7. ಸಂಘದ ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳು ಹಾಗೂ ಸಂಘದ ಉಪನಿಯಮಗಳನ್ವಯ ಯಾವುದೇ ಅನರ್ಹತೆಗಳನ್ನು ಹೊಂದಿರಬಾರದು.
8. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವ ಅಭ್ಯರ್ಥಿಗಳು ನಾಮಪತ್ರಗಳನ್ನು ಸಂಘದ ಕಾರ್ಯದರ್ಶಿಯವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
9. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ಎ (1) ರಂತೆ ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ ಗೊತ್ತುಪಡಿಸಿದ ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಆಫೀಸರ್‌ಗೆ ಸಂಘದ ಕಛೇರಿಯಲ್ಲಿ ನಾಮಪತ್ರಗಳನ್ನು ನಮೂನೆ XIII ರಲ್ಲಿ ಭರ್ತಿ ಮಾಡಿ ಅಭ್ಯರ್ಥಿಯು ಮತ್ತು ಮತದಾನದ ಹಕ್ಕುಳ್ಳ ಮತ್ತೊಬ್ಬ ಸದಸ್ಯರು ಸೂಚಕರಾಗಿ ಯುಕ್ತವಾಗಿ ರುಜು ಮಾಡಿರುವ ನಾಮಪತ್ರಗಳನ್ನು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಸಲ್ಲಿಸತಕ್ಕದ್ದು. ಅಂತಹ ನಾಮಪತ್ರವು ಅಭ್ಯರ್ಥಿಯು ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಅಥವಾ ಪರಿಶಿಷ್ಟ ಜಾತಿ ಮೀಸಲು ಅಥವಾ ಪರಿಶಿಷ್ಟ ಪಂಗಡ ಮೀಸಲು ಅಥವಾ ಹಿಂದುಳಿದ ವರ್ಗಗಳ ಪ್ರವರ್ಗ 'ಎ' ಮೀಸಲು, ಪ್ರವರ್ಗ 'ಬಿ' ಮೀಸಲು ಅಥವಾ ಮಹಿಳಾ ಮೀಸಲು ಸ್ಥಾನಕ್ಕೆ ಅಭ್ಯರ್ಥಿಯಾಗಿ ಸ್ಪರ್ಧಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಮತ್ತು ಆತನ/ಅವಳ ಸಹಿಯುಳ್ಳ ಘೋಷಣೆಯನ್ನು ಒಳಗೊಂಡಿರತಕ್ಕದ್ದು.
10. ಒಬ್ಬರು ಸ್ಪರ್ಧಾಳು ಒಂದು ಸ್ಥಾನಕ್ಕಿಂತ ಹೆಚ್ಚಿನ ಸ್ಥಾನಗಳಿಗೆ ಅಭ್ಯರ್ಥಿಯಾಗಿರತಕ್ಕದ್ದಲ್ಲ. ಪ್ರತಿಯೊಂದು ನಾಮಪತ್ರವು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾದ ಒಬ್ಬರು ಸೂಚಕರಿಂದ ಸೂಚಿಸಲ್ಪಟ್ಟಿರಬೇಕು. ಒಬ್ಬ ಸೂಚಕನು/ಳು ಒಬ್ಬರು ಅಭ್ಯರ್ಥಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಸೂಚಿಸತಕ್ಕದ್ದಲ್ಲ.
11. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ಎ (3) ರಂತೆ ಚುನಾವಣೆಯಲ್ಲಿ ಸಾಮಾನ್ಯ ಸ್ಥಾನದಿಂದ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ರೂ. 2000.00 (ಎರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಹಾಗೂ ಮಹಿಳಾ ಮೀಸಲು, ಹಿಂದುಳಿದ ವರ್ಗದ ಮೀಸಲು, ಪರಿಶಿಷ್ಟ ಜಾತಿ ಮೀಸಲು ಮತ್ತು ಪರಿಶಿಷ್ಟ ಪಂಗಡದ ಮೀಸಲು ಸ್ಥಾನದಿಂದ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ರೂ. 1000.00 (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸಂಘದ ಹೆಸರಿಗೆ (ನಗದು/ ಪೇ ಆರ್ಡರ್/ ಡಿಮ್ಯಾಂಡ್ ಡ್ರಾಫ್ಟ್) ಠೇವಣಿಯಾಗಿ ಪಾವತಿಸಿ ರಶೀತಿಯನ್ನು ನಾಮಪತ್ರಕ್ಕೆ ಲಗತ್ತಿಸಿ ಸಲ್ಲಿಸತಕ್ಕದ್ದು.
12. ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳು ಅಥವಾ ಅವರನ್ನು ನಾಮಪತ್ರದಲ್ಲಿ ಸೂಚಿಸಿರುವ ಸೂಚಕರು ಹಾಜರಿರಬಹುದು.
13. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ಸಿ (3) ರನ್ವಯ ಅಭ್ಯರ್ಥಿಯು ನಾಮಪತ್ರವನ್ನು ಹಿಂತೆಗೆದುಕೊಳ್ಳಲು ಒಂದು ಬಾರಿ ಸಲ್ಲಿಸಿದ ನೋಟೀಸನ್ನು ಪುನಃ ವಾಪಸ್ ಪಡೆಯಲು

ಅವಕಾಶವಿರುವುದಿಲ್ಲ.

14. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ಎಇ (4) ರಂತೆ ಚುನಾವಣೆಯಲ್ಲಿ ಸ್ಪರ್ಧಿಸಿದ ಯಾವುದೇ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತವಾಗಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯ ಆರನೇ ಒಂದರಷ್ಟು ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳನ್ನು ಅವನು ಪಡೆಯದಿದ್ದಲ್ಲಿ, ಆತನ ಠೇವಣಿಯನ್ನು ಸಂಘಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪರಂತು, ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ಅಥವಾ ಮಹಿಳಾ ಮೀಸಲು ಅಭ್ಯರ್ಥಿಯ ಸಂಬಂಧದಲ್ಲಿ, ಆತನು/ಅವಳು ಪಡೆದ ಕ್ರಮಬದ್ಧ ಮತಗಳ ಸಂಖ್ಯೆಯು ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕಿಂತ ಕಡಿಮೆ ಇದ್ದಲ್ಲಿ, ಆತನ/ಅವಳ ಠೇವಣಿಯನ್ನು ಸಂಘಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

15. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 39 (ಸಿ) ಯಿಂದ 39 (ಕೆ) ವರೆಗೆ ಇರತಕ್ಕ ವಿಧಿಗಳನ್ನು ಉಲ್ಲಂಘಿಸಿದಲ್ಲಿ ಅವುಗಳನ್ನು ಚುನಾವಣಾ ಅಪರಾಧಗಳೆಂದು ಪರಿಗಣಿಸಿ ಕಾನೂನು ಕ್ರಮ ಜರುಗಿಸಲಾಗುವುದು.

16. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 (ಇ) ರನ್ವಯ ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷ ಅಂದರೆ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷಕ್ಕೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವ ಉಮೇದುವಾರರು ಕೆಳಗೆ ನಮೂದಿಸಿರುವ ಚಿಹ್ನೆಗಳ ಪೈಕಿ ಯಾವುದಾದರೂ ಮೂರು ಚಿಹ್ನೆಗಳನ್ನು ತಮ್ಮ ಅರ್ಜಿಯಲ್ಲಿ ನಮೂದಿಸುವುದು. ಆದರೆ ಚಿಹ್ನೆ ನೀಡುವ ಅಧಿಕಾರ ಅಂತಿಮವಾಗಿ ರಿಟರ್ನಿಂಗ್ ಆಫೀಸರ್ ರವರಿಗೆ ಇರುತ್ತದೆ.

1.ಕಪಾಟು. 2. ಏರ್‌ಕಂಡೀಷನರ್. 3. ಆಟೋರೀಕ್ಷಾ. 4. ಬಲೂನ್. 5. ಹಣ್ಣುಗಳ ಬುಟ್ಟಿ 6. ಬ್ಯಾಟ್. 7. ಬ್ಯಾಟ್ಸಮನ್. 8. ತಕ್ಕಡಿ. 9.ಟೇಬಲ್ 10.ಕಪ್ಪು ಹಲಗೆ. 11. ಕುರ್ಚಿ. 12. ಗೋಪುರ. 13.ಬ್ರಿಫ್‌ಕೇಸ್. 14. ಕಟಕಿ. 15. ಕಾರು. 16. ಬಕೇಟ್. 17. ಏರೋಪ್ಲೇನ್. 18. ಸೂರ್ಯ. 19. ಕ್ಯಾಮರಾ. 20. ಮೇಣದಬತ್ತಿ. 21. ಕೇರಂಬೋರ್ಡ. 22. ಬಸ್ಸು. 23. ಕ್ಯಾರೆಟ್. 24. ಹೂಕೋಸು. 25. ಕೊಳಾಯಿ. 26. ಗಡಿಯಾರ. 27. ಕೋಟು. 28. ಶೀಟಿ. 29.ಮಂಚ. 30.ಕಿರೀಟ. 31.ಕಪ್ ಅಂಡ್ ಸಾಸರ್. 32. ಕಟಿಂಗ್‌ಪ್ಲೇಯರ್. 33. ಬಲ್ಬ್, 34. ಡೀಸೆಲ್ ಪಂಪ್. 35. ಡೀಶ್ ಅಂಟೇನಾ. 36. ರೈಲ್ವೆ ಇಂಜಿನ್. 37. ವಿದ್ಯುತ್ ಕಂಬ. 38. ಶಂಕ. 39. ವೀಣೆ. 40. ಲಂಗ. 41.ಮುತ್ತಿನ ಹಾರ. 42. ಗುಡಿಸಲು. 43. ಗ್ಯಾಸ್ ಸಿಲೆಂಡರ್. 44. ಗ್ಯಾಸ್ ಸ್ಟೌವ್. 45. ಗಾಜಿನ ಲೋಟ. 46. ದ್ರಾಕ್ಷಿ. 47. ಹಾರ್ಮೋನಿಯಂ. 48. ಟೋಪಿ. 49. ದೀಪ. 50. ಹಾಕಿ ಬ್ಯಾಟು ಮತ್ತು ಚೆಂಡು. 51. ರೋಡ್‌ರೋಲರ್. 52. ಇಸ್ತ್ರಿಪೆಟ್ಟಿಗೆ. 53. ಕೆಟಲ್. 54. ಗಾಳಿಪಟ. 55. ಹೂವು. 56. ಅಂಚೆಪೆಟ್ಟಿಗೆ. 57. ಮಿಕ್ಸಿ. 58. ನೇಲ್ ಕಟರ್. 59. ನೆಕ್ ಟೈ 60. ಪೆನ್ ಸ್ಟಾಂಡ್. 61. ಬುಗುರಿ. 62. ಪ್ಲೇಟ್ ಸ್ಟಾಂಡ್. 63. ಕುಡಿಕೆ. 64. ಪ್ರೇಷರ್ ಕುಕ್ಕರ್. 65. ಬೀಗ ಮತ್ತು ಕೀ. 66. ರೆಫ್ರೀಜರೇಟರ್. 67. ಉಂಗುರ. 68. ಗರಗಸ. 69. ಸ್ಕೂಲ್ ಬ್ಯಾಗ್. 70. ಕತ್ತರಿ.71. ಹೊಲಿಗೆ ಯಂತ್ರ 72. ಶಟಲ್. 73. ಸ್ಲೇಟ್. 74. ಸ್ಟೆತೊಸ್ಕೋಪ್.75. ಸ್ಟೂಲ್.76. ಟೇಬಲ್. 77. ಟೇಬಲ್ ಲ್ಯಾಂಪ್. 78. ದೂರವಾಣಿ. 79. ದೂರದರ್ಶನ. 80. ಸ್ಕೂಟರ್.81. ಟೂಥ್‌ಬ್ರಷ್. 82. ತುತ್ತೂರಿ. 83. ಪಿಟೀಲು. 84. ವಾಕಿಂಗ್‌ಸ್ಟಿಕ್. 85. ಅನಾನಸ್. 86. ಕೊಳಲು. 87. ಸೇಬು. 88. ಗಂಟೆ. 89. ದೀಪಾಲೆ ಕಂಬ. 90. ಕೈ ಪಂಪು.

17. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 (ಓ) ರಂತೆ ಮತದಾನ ಮಾಡುವ ಸಂದರ್ಭದಲ್ಲಿ ಪ್ರತಿಯೊಬ್ಬ ಮತದಾರನು ನಿಯಮ 13(ಎ) ರಡಿ ಸಂಘದಿಂದ ನೀಡಲಾದ ತಮ್ಮ ಭಾವಚಿತ್ರವುಳ್ಳ ಗುರುತಿನ ಕಾರ್ಡ್‌ನ್ನು ಹಾಜರುಪಡಿಸಿ ಮತದಾನ ಮಾಡುವ ಸ್ಥಳದಲ್ಲಿ ಇಡಲಾಗುವ ರಿಜಿಸ್ಟರ್‌ನಲ್ಲಿ ಸಹಿ ಮಾಡಿ ಗುರುತಿನ ಚೀಟಿ ಪಡೆದು, ಗುರುತಿನ ಕಾರ್ಡ್ ಮತ್ತು ಗುರುತಿನ ಚೀಟಿ ಇವೆರಡನ್ನು ಹಾಜರುಪಡಿಸಿ ಮತದಾನ ಮಾಡತಕ್ಕದ್ದು. ತಪ್ಪಿದಲ್ಲಿ ಮತದಾನ ಮಾಡಲು ಅವಕಾಶವಿರುವುದಿಲ್ಲ. ಹಾಗೂ ಇತರೆ ಯಾವುದೇ ತರಹದ ಗುರುತಿನ ಚೀಟಿ ತಂದರೂ ಸಹ ಮತದಾನ ಮಾಡಲು ಅವಕಾಶವಿರುವುದಿಲ್ಲ.

18. ಅರ್ಹ ಮತದಾರರಿಗೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಅವಕಾಶವಿರುತ್ತದೆ.

ಸಹಿ/-

(ರಾಜು .ಬಿ)

ಸ್ಥಳ : ಮೈಸೂರು
ರಿಟರ್ನಿಂಗ್ ಆಫೀಸರ್

ದಿ : 09.1.2024
ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,

ಮೈಸೂರು